ಪ್ರವಾಸಕ್ಕೆ ಹೋದ ಈ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸುತ್ತಾಡಿದ ಮೇಲೆ ಒಂದು ಮರದ ನೆರಳಿನಲ್ಲಿ ವಿಶ್ರಾಂತಿಗಾಗಿ ಕುಳಿತಿದ್ದರು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಕುಳಿತ ಸಿಂಚನಾ ಎಂಬ ಹುಡುಗಿ ಶಿಕ್ಷಕರ ಹತ್ತಿರ ಬಂದು, 'ಸರ್, ಅಲ್ಲಿ ಮರದ ಮೇಲೆ ನೋಡಿ. ಆ ಕೋತಿ ನನ್ನನ್ನು ನೋಡಿ ಕಣ್ಣು ಬಿಡ್ತಾ ಇದೆ; ಒಮ್ಮೊಮ್ಮೆ ಹಲ್ಲು ಕಿರಿತಾ ನನ್ನನ್ನು ಹೆದರಿಸುತ್ತಾ ಇದೆ' ಎಂದಳು. ಮುಂದೆ ಹೋಗಿ ನೋಡಿದ ಶಿಕ್ಷಕರು ಆ ಹುಡುಗಿಗೆ 'ಆ ಕೋತಿಯನ್ನು ನೋಡಿ ಮೊದಲು ಏನು ಮಾಡಿದ್ದೆ?' ಎಂದು ಕೇಳಿದರು. 'ಸರ್, ನಾನು ಮೊದಲು ಅದಕ್ಕೆ ಕಣ್ಣು ಬಿಟ್ಟಿದ್ದೆ, ಹಲ್ಲು ಕಿರಿದಿದ್ದೆ' ಎಂದು ಹೆದರುತ್ತಲೆ ಹೇಳಿದಳು. ಆಗ ಅವರು 'ಹಾ! ನೀನು ಹಾಗೆ ಮಾಡಿದ್ದಕ್ಕೆ ಅದು ತಿರುಗಿ ನಿನಗೆ ಹಾಗೆ ಮಾಡಿತು' ಎಂದರು. 'ಈಗ ಆ ಕೋತಿಯನ್ನು ನೋಡಿ ಟಾಟಾ ಮಾಡು' ಎಂದರು. ಶಿಕ್ಷಕರು ಹೇಳಿದಂತೆ ಸಿಂಚನಾ ಮಾಡಿದಳು. ಆಗ ಕೋತಿಯೂ ತಿರುಗಿ ಟಾಟಾ ಮಾಡಿತು. ಅದನ್ನು ಕಂಡು ಎಲ್ಲಾ ವಿದ್ಯಾರ್ಥಿಗಳಿಗೆ ಖುಷಿಯಾಯಿತು. ಎಲ್ಲರೂ ಕೋತಿಗೆ ಟಾಟಾ ಮಾಡಲು ಸುರು ಮಾಡಿದರು.

ಆಗ ಶಿಕ್ಷಕರು ಮಕ್ಕಳನ್ನು ಉದ್ದೇಶಿಸಿ 'ಮಕ್ಕಳೆ, ಪ್ರಾಣಿ, ಪಕ್ಷಿಗಳು ಎಂದರೆ ಪ್ರಕೃತಿ, ಈ ಪ್ರಕೃತಿಗೆ ನಾವು ಒಳ್ಳೆಯದನ್ನು ಮಾಡಿದರೆ, ಅದು ತಿರುಗಿ ನಮಗೆ ಒಳ್ಳೆಯದನ್ನು ಮಾಡುತ್ತದೆ. ಕೆಟ್ಟದನ್ನು ಮಾಡಿದರೆ ನಮಗೆ ಕೆಟ್ಟದಾಗುತ್ತದೆ. ಅದಕ್ಕಾಗಿ ನಾವು ಪ್ರಾಣಿ ಪಕ್ಷಿಗಳನ್ನು ಪ್ರೀತಿಸಬೇಕು. ಅವುಗಳನ್ನು ಹಿಂಸಿಸಬಾರದು. ನಮ್ಮ ಸುತ್ತಮುತ್ತಲಿನ ಪರಿಸರಕ್ಕೂ ಒಳಿತನ್ನೇ ಮಾಡಬೇಕು. 'ಎಂದರು. ಮಕ್ಕಳೆಲ್ಲ ಒಕ್ಕೊರಲಿನಿಂದ 'ಆಯ್ತು ಸರ್' ಎಂದರು.





# ಮರ ಮತ್ತು ನೆರಳು

ಸಂಗಮೇಶ ಗುಜಗೊಂಡ, ಮೂಡಲಗಿ,
ಕಲೆ: ಸಂತೋಷ್ ಸಸಿಹಿತ್ಲು

ದೊಡ್ಡ ಮರದ
ದಟ್ಟ ನೆರಳು
ತಂಪು ಹವೆಯ ಸುರಿಸಿದೆ
ಕಡಲ ತಡಿಯ
ತೆರನೆ ಇಲ್ಲೂ
ಗಾಳಿ ಹಿತವು ಆಗಿದೆ!

ಉರಿವ ತಾಪ
ಮಾಯವಾಗಿ
ಇಂದ್ರಜಾಲ ಎನಿಸಿದೆ
ಮರದ ಶಕ್ತಿ
ಕಂಡು ಮನದಿ
ಬೆರಗು ಮೂಡಿ ನಿಂತಿದೆ!

ಊಟ ಆಟ
ಓದು ನಿದ್ದೆ
ಇಲ್ಲಿ ಏನಿತು ಮೋದವು
ಬೇಗೆ ನೀಗಿ
ತಣಿಯಲಿಕ್ಕೆ
ಯಾವ ವೆಚ್ಚ ಬಾರವು!

ಖಗ ಮೃಗ
ಮನುಜಕುಲವು
ನೆರಳಿನಾಶ್ರಯ ಪಡೆದಿದೆ
ಬಿಸಿಲ ದಿನಕೆ
ಮರದ ನೆರಳು
ಸಗ್ಗವಾಗಿ ಬಿಟ್ಟಿದೆ!
ಬಿಸಿಲನುಂಡು
ನೆರಳು ನೀಡಿ
ಮರವು ದೊಡ್ಡದೆನಿಸಿದೆ

ನೆರಳಿನಿಂದೂ
ತನ್ನ ಬದುಕು
ಧನ್ಯಮಾಡಿಕೊಂಡಿದೆ!





ನಿಭೀಷ್ ವಿ.
5ನೇ ತರಗತಿ,
ಬಿಜೆಎಸ್ ಶಾಲೆ
ಬೆಂಗಳೂರು ಉತ್ತರ